ದಿನಾಂಕಃ 01-06-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು.

ಮುಂದುವರಿದ ಪಾಟೀಸವಾಲು ಶ್ರೀ. ಎಸ್.ಬಿ.ಆರ್. ಪ್ರತಿವಾದಿಗಳ ಪರ ವಕೀಲರಿಂದ ಃ-

ನಾನು ಇಂದಿನವರೆಗೆ ಎಂ.ಆರ್. 6/1972-73 ಹಾಗೂ ಎಂ.ಆರ್. 4/1992-93 ನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ. ಅದೇ ರೀತಿ ನಾನು ಇಂದಿನವರೆಗೆ ದಾವಾ ಸ್ವತ್ತುಗಳ ಖಾತೆ ಪಹಣಿಯನ್ನು ಹಾಗೂ ಅದಕ್ಕೆ ಸಂಬಂದಿಸಿದ ಎಂ.ಆರ್.ಗಳನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ. ದಾನಪತ್ರದನ್ವಯ 1 ರಿಂದ 4ನೇ ಪ್ರತಿವಾದಿಗಳು ಈಗ ಅದರ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳಲ್ಲಿ ಯಾವುದೇ ಬೋರ್‌ವೆಲ್‌ಗಳು ಇರುವುದಿಲ್ಲ. ಎಷ್ಟು ಎಕರೆಯಲ್ಲಿ ಅಡಿಕೆ ತೋಟ ಇದೆ ಎಂದರೆ ಅಡಿಕೆ ತೋಟ ಇಲ್ಲ ಎಂದು ಹೇಳುತ್ತಾರೆ. ದಾವಾ ಸ್ವತ್ತುಗಳಲ್ಲಿ ಏನೂ ಬೆಳೆಯನ್ನೂ ಸಹ ಇಟ್ಟಿಲ್ಲ. ಈ ಕೇಸು ಹೂಡಿದ ಮೇಲೆ ಪ್ರತಿವಾದಿಗಳು ದಾವಾ ಸ್ವತ್ತುಗಳಲ್ಲಿ ಯಾವುದೇ ಬೆಳೆ ಇಟ್ಟಿರುವುದಿಲ್ಲ. ಅದಕ್ಕಿಂತ ಮುಂಚಿತವಾಗಿ ನನ್ನ ಅಜ್ಜಿ , ಅಜ್ಜ , ಮಾವ ಒಟ್ಟಿಗೆ ರಾಗಿ, ಜೋಳ ಬೆಳೆಯನ್ನು ದಾವಾ ಸ್ವತ್ತುಗಳಲ್ಲಿ ಇಡುತ್ತಿದ್ದೆವು.

ನನ್ನ ಪ್ರಕಾರ ನನ್ನ ಅಜ್ಜಿ ಸಾಕಮ್ಮ ಆಗಿರುತ್ತಾಳೆ. ಸಾಕಮ್ಮ ಪವತಿಯಾಗಿ ಸುಮಾರು 30 ವರ್ಷಗಳು ಆಗಿರುತ್ತವೆ. ಅದಂಕ್ಕಿಂತ ಮುಂಚಿತವಾಗಿ ನನ್ನ ಅಜ್ಜಿಯ ಗಂಡನಾದ ಈರಲಕ್ಕಪ್ಪ ಸುಮಾರು 40 ವರ್ಷದ ಹಿಂದೆ ಪವತಿಯಾಗಿದ್ದನು. ನನ್ನ ಅಜ್ಜಿ ಪವತಿಯೂದ 30 ವರ್ಷದ ನಂತರ ನಾವೆಲ್ಲರೂ ಸಹ ಜಂಟಿಯೂಗಿ ದಾವಾ ಸ್ವತ್ತುಗಳನ್ನು ಅನುಭವಿಸುತ್ತಿದ್ದೇವೆ. ನಾವು ಜಂಟಿಯಾಗಿ ದಾವಾ ಸ್ವತ್ತುಗಳನ್ನು ಅನುಭವಿಸುತ್ತಿದ್ದ ಬಗ್ಗೆ ತೋರಿಸಲು ಯಾವುದಾದರೂ ದಾಖಲೆ ಇವೆಯೇ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾನಾಗಲೀ, ನನ್ನ ತಾಯಿಯಾಗಲೀ, ಪ್ರತಿವಾದಿಯ ಕುಟುಂಬಕ್ಕೆ ಸಂಬಂಧಿಕರಲ್ಲ ಎಂದರೆ ಸರಿಯಲ್ಲ. ಓಬಳಮ್ಮ ಓದಿರಲಿಲ್ಲ.

ಓಬಳಮ್ಮನಿಗೆ ಎಷ್ಟು ವರ್ಷದ ಹಿಂದೆ ಮದುವೆ ಆಗಿತ್ತು ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ. ಮೃತ ವಾದಿ ಈರಲಕ್ಕಪ್ಪನ ಮಗಳು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ಓಬಳಮ್ಮನ ಬಾಬ್ತು ಮದುವೆಯಾದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ. ಗಂಜಲಗುಂಟೆಯಲ್ಲಿ ಲಕ್ಕಪ್ಪ ಎಂಬುವವರು ಸುಮಾರು ಜನರು ಇದ್ದಾರೆ. ಸಾಕ್ಷಿ ಮುಂದುವರಿದ ಈರಲಕ್ಕಪ್ಪ ಎಂಬುವವರು ಯಾರೂ ಇರುವುದಿಲ್ಲ ಎಂದು ನುಡಿಯುತ್ತಾರೆ. ಗಂಜಲಗುಂಟೆಯಲ್ಲಿ ಓಬಳಮ್ಮ ಎಂಬ ಹೆಸರಿನ ಮಹಿಳೆ ಯಾರೂ ಇಲ್ಲ. ಓಬಳಮ್ಮ ಚಿಕ್ಕತಿಮ್ಮನಹಳ್ಳಿಯಲ್ಲಿ ವಾಸವಾಗಿದ್ದ ಬಗ್ಗೆ ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ಸಾಕ್ಷಿ ಮುಂದುವರಿದ ವಂಶವೃಕ್ಷ ಇದೆ ಎಂದು ನುಡಿಯುತ್ತಾರೆ. ವಂಶವೃಕ್ಷವನ್ನು ಬರೆಸಲು ಕಾರ್ಯದರ್ಶಿಗಳಿಗೆ ನಾನೇ ಮಾಹಿತಿ ಕೊಟ್ಟು ಬರೆಸಿರುತ್ತೇನೆ. ಓಬಳಮ್ಮನ ವಂಶವು ಚಿಕ್ಕತಿಮ್ಮನಹಳ್ಳಿಯಲ್ಲಿ ಎಂದಿಗೂ ಸಹ ವಾಸವಾಗಿರಲಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸೀಗನಹಳ್ಳಿಯ ಸ.ನಂ. 18 ಇಂದಿಗೆ ನನ್ನ ಹೆಸರಿನಲ್ಲಿ ಖಾತೆ ಇದೆ. ನನ್ನ ತಂದೆಯ ಹೆಸರು ಮಾರಣ್ಣ . ಆತನಿಗೆ ಯಾರೂ ಅಣ್ಣ-ತಮ್ಮಂದಿರು ಇಲ್ಲ. ನಾನು ಹಾಜರುಪಡಿಸಿರುವ ಕ್ರಯಪತ್ರ ಈರಲಕ್ಕಪ್ಪನಿಗಾಗಲೀ, ಪ್ರತಿವಾದಿಗಳಿಗಾಗಲೀ ಸಂಬಂದಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದಲ್ಲಿ ನಮೂದಾದ ಜಮೀನು ಹಾಗೂ ಈರಲಕ್ಕಪ್ಪನಿಗೆ ಯಾವುದೇ ಸಂಬಂದ ಇರಲಿಲ್ಲ ಎಂದರೆ ಸರಿಯಲ್ಲ.

ಯೂವ ವರ್ಷದಲ್ಲಿ ಮತ್ತು ಯಾವ ದವಸ ಧಾನ್ಯಗಳನ್ನು ಸಾಕಮ್ಮರವರು ಓಬಳಮ್ಮನಿಗೆ ಕೊಡುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-1 ಬರೆಯಲು ವಕೀಲರಿಗೆ ನನ್ನ ತಾಯಿ ಮಾಹಿತಿ ಕೊಟ್ಟಿರುತ್ತಾರೆ. ನಿಪಿ-1 ರಲ್ಲಿ ನಮೂದಾದ ಸ.ನಂ. 47/1 , ವಿಸ್ತೀರ್ಣ 2 ಎಕರೆ 15 ಗುಂಟೆ ಜಮೀನನ್ನು ನಾನು ಈ ದಾವೆಯಲ್ಲಿ ಸೇರಿಸಿರುತ್ತೇನೆ. ಸದರಿ ಸ.ನಂ. ಚಿಕ್ಕತಿಮ್ಮನಹಳ್ಳಿ ಗ್ರಾಮಕ್ಕೆ ಸೇರಿದ್ದಾಗಿರುತ್ತದೆ. ನಾನು ದಾವೆ ಹೂಡುವ ಕಾಲಕ್ಕೆ ಸ.ನಂ. 47/1 ರ ಖಾತೆ ಈರಲಕ್ಕಪ್ಪ ಮತ್ತು ಲಕ್ಕಪ್ಪರವರ ಹೆಸರಿನಲ್ಲಿ ಬರುತ್ತಿತ್ತು. ಸ.ನಂ. 47/1 ರ ಬಗ್ಗೆ ನಾನು ರೆವಿನ್ಯೂ

ದಾಖಲೆಗಳನ್ನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ಈಗ ಸಾಕ್ಷಿಗೆ ತಾನು ಹಾಜರುಪಡಿಸಿರುವ ದಾಖಲೆಗಳನ್ನು ತೋರಿಸಿ ಅದರಲ್ಲಿ ಸ.ನಂ. 47/1 ರ ದಾಖಲೆ ಎಲ್ಲಿದೆ ಎಂದು ತೋರಿಸಲು ಪ್ರಶ್ನಿಸಿದಾಗ ಸದರಿ ಸ.ನಂ. ಗೆ ಸಂಬಂದಪಟ್ಟಂತೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿ ಯಾವ ಕಾರಣಕ್ಕಾಗಿ ಸದರಿ ಸ.ನಂ.ನ ದಾಖಲೆಗಳನ್ನು ಈ ಕೇಸ್‌ನಲ್ಲಿ ಹಾಜರುಪಡಿಸಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ತಾಯಿ ರಂಗಾಚಾರಿ ಎಂಬುವವರಿಗೆ ಸುಮಾರು 15 ವರ್ಷದ ಹಿಂದೆ ಮಾರಾಟ ಮಾಡಿದ್ದರು. ನಿಪಿ-1 ಕಳುಹಿಸಿಸುವ ಕಾಲಕ್ಕೆ ಸದರಿ ಮಾಹಿತಿ ನನ್ನ ತಾಯಿಗೆ ಗೊತ್ತಿತ್ತು , ನನಗೆ ಗೊತ್ತಿರಲಿಲ್ಲ. ಓಬಳಮ್ಮನಿಗೆ ಪ್ರತಿವಾದಿಗಳ ಕುಟುಂಬದ ವ್ಯವಹಾರವಾಗಲೀ ಹಾಗೂ ಸ್ವತ್ತುಗಳ ಬಗ್ಗೆ ಮಾಹಿತಿಯಾಗಲೀ ಆಕೆಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ.

ಈರಲಕ್ಕಪ್ಪನ ಹೆಂಡತಿಯಾದ ಸಾಕಮ್ಮ ಈರಲಕ್ಕಪ್ಪನ ಒಬ್ಬಳೇ ವಾರಸುದಾರರಾಗಿ ಸ.ನಂ. 34/1, 34/3 41/2 ಹಾಗೂ 41/15 ಸ್ವತ್ತಿನ ಸ್ವಾಧೀನಾಜುಭವದಲಿಲ‌ಇದ್ದಳು ಎಂದರೆ ಸಾಕ್ಷಿಯು ನಾವು ಜಂಟಿಯಾಗಿ ಅನುಭವಿಸುತ್ತಿದ್ದೆವು ಎಂದು ನುಡಿಯುತ್ತಾರೆ. ದಾನ ಮಾಡಿದ ದಿನದಿಂದ ಸ.ನಂ. 34/1 ಹಾಗೂ 34/3 ನ್ನು ಹೊರತುಪಡಿಸಿ ಪ್ರತಿವಾದಿಗಳು ತಮ್ಮ ಉಳಿದ ಜಮೀನುಗಳನ್ನು ವಿಭಾಗ ಮಾಡಿಕೊಂಡು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಎರಡು ಸ.ನಂ.ಗಳನ್ನು ಹೊರತುಪಡಿಸಿದ ಉಳಿದ ದಾವಾ ಸ್ವತ್ತುಗಳ ಖಾತೆ ಪಹಣಿ ಸಣ್ಣಕಾಮಣ್ಣ ಹಾಗೂ ನಾಗರಾಜು ಎಂಬುವವರ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿಯಲ್ಲ.

ಸಾಕಮ್ಮನಿಗೆ ಸೇರಿದ ಒಂದು ಮನೆಯೂ ಸಹ ಇದೆ ಎಂದರೆ ಸಾಕ್ಷಿಯು ಜಂಟಿಯಾಗಿದೆ ಎಂದು ನುಡಿಯುತ್ತಾರೆ. ಸಾಕಮ್ಮ ಇರುವ ಮನೆಯ ಪೂ - ಪುಟ್ಟಣ್ಣನ ಮನೆ, ಪ – ದಾರಿ, ಉ – ದಾರಿ , ದ – ರಾಮಣ್ಣ ಮತ್ತು ಕಾಮಣ್ಣನ ಮನೆ ಇದೆ. ಮುಂಚಿತವಾಗಿ ಸದರಿಗಿ ಮನೆಪಿಯ ಖಾತೆ ಈರಲಕ್ಕಪ್ಪ

ಹಾಗೂ ಲಕ್ಕಪ್ಪನ ಹೆಸರಿನಲ್ಲಿ ಜಂಟಿಯಾಗಿ ಬರುತ್ತಿತ್ತು. ಈಗ ಯಾರ ಹೆಸರಿನಲ್ಲಿ ಬರುತ್ತಿದೆ ಎಂಬ ವಿಚಾರ ನನಗೆ ಗೊತ್ತಿಲ್ಲ. ಸದರಿ ಮನೆಯನ್ನು ಈರಲಕ್ಕಪ್ಪ ಮತ್ತು ಲಕ್ಕಪ್ಪ ರವರು ಇರುವಾಗಲೇ ಹಂಚಿಕೊಂಡು ಈರಲಕ್ಕಪ್ಪನ ಹೆಂಡತಿಯಾದ ಸಾಕಮ್ಮನಿಗೆ ತನ್ನ ಹಿಸ್ಸೆ ಬಂದಿದ್ದು , ಲಕ್ಕಪ್ಪನ ಹಿಸ್ಸೆಗೆ ಬರುವ ಮನೆಯನ್ನು ಪ್ರತಿವಾದಿಗಳು ಹಂಚಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮನೆಯನ್ನು ಈ ದಾವೆಯಲ್ಲಿ ನಾನು ಸೇರಿಸಿರುತ್ತೇನೆ. ಈ ಮನೆಯನ್ನು ಹೊರತುಪಡಿಸಿ ಈರಲಕ್ಕಪ್ಪನ ಹೆಸರಿಗೆ ಬೇರೆ ಯಾವುದೇ ಸ್ವತ್ತುಗಳು ಇರಲಿಲ್ಲ.

ನಾನು ಹಾಗೂ ನನ್ನ ತಾಯಿಗೆ ಪ್ರತಿವಾದಿಗಳು ಸಂಬಂಧಿಕರಲ್ಲ , ದಾವಾ ಸ್ವತ್ತಿಗೆ ಯಾವುದೇ ರೀತಿಯ ಸಂಬಂದ ಇರುವುದಿಲ್ಲ, ದಾವಾ ಸ್ವತ್ತುಗಳನ್ನು ಹೊಡೆಯಲು ನ್ಯಾಯಾಲಯದ ಮುಂದೆ ಬಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈರಲಕ್ಕಪ್ಪ ಮಗಳು ಓಬಳಮ್ಮ ಎಂದು ಸುಳ್ಳು ದಾಖಲೆಯನ್ನು ತಂದು ಹಾಕಿ ಬೇರೆ ಸ್ವತ್ತುಗಳ ದಾಖಲೆಯನ್ನು ತಂದು ಹಾಕಿ ನ್ಯಾಯಾಲಯದ ಮುಂದೆ ಬಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ.

(ತೆ ನ್ಯಾ ನ ಉ ಲೇ ಬೆ ಮಾ)

ಓ ಹೇ ಕೇ ಸ ಇ ಎ ಒ

(ಅಬ್ದುಲ್ ರಹಿಮಾನ್ ಎ. ಮುಲ್ಲಾ)
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ.